# First Meeting of the National Coordination Committees of India and Uzbekistan on implementation of joint projects

August 24, 2020

---

## ಜಂಟಿ ಯೋಜನೆಗಳ ಅನುಷ್ಠಾನ ಕುರಿತು ಭಾರತ ಮತ್ತು ಉಜ್ಬೇಕಿಸ್ತಾನ್‌ನ ರಾಷ್ಟ್ರೀಯ ಸಮನ್ವಯ ಸಮಿತಿಗಳ ಮೊದಲ ಸಭೆ

ಆಗಸ್ಟ್ 24, 2020

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಮತ್ತು ಅಧ್ಯಕ್ಷ ಶ್ರೀ ಶವ್ಕತ್ ಮಿರ್ಜಿಯೊಯೆವ್ ರವರ ನಿರ್ದೇಶನದ ಮೇರೆಗೆ ರಚಿಸಲಾದ ಭಾರತ ಮತ್ತು ಉಜ್ಬೇಕಿಸ್ತಾನ್ ನಡುವೆ ಪರಸ್ಪರ ಒಪ್ಪಿದ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆಗಾಗಿ ರಾಷ್ಟ್ರೀಯ ಸಮನ್ವಯ ಸಮಿತಿಗಳ ಮೊದಲ ಸಭೆ 24 ಆಗಸ್ಟ್ 2020 ರಂದು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವರಾದ ಶ್ರೀ ವಿ.ಮುರಲೀಧರನ್ ಹಾಗೂ ಉಪ ಪ್ರಧಾನ ಮಂತ್ರಿ ಮತ್ತು ಉಜ್ಬೇಕಿಸ್ತಾನ್‌ನ ಹೂಡಿಕೆ ಮತ್ತು ವಿದೇಶಿ ವ್ಯಾಪಾರ ಸಚಿವರಾದ ಶ್ರೀ ಸರ್ದೋರ್ ಉಮುರ್ಜಾಕೋವ್ ರವರ ಸಹ-ಅಧ್ಯಕ್ಷತೆಯಲ್ಲಿ ನಡೆಯಿತು..

ದ್ವಿಪಕ್ಷೀಯ ಹೂಡಿಕೆ ಒಪ್ಪಂದ, ಆದ್ಯತೆಯ ವ್ಯಾಪಾರ ಒಪ್ಪಂದ, ಎರಡು ದೇಶಗಳ ಕೃಷಿ ಉತ್ಪನ್ನಗಳಿಗೆ ಪರಸ್ಪರ ಮಾರುಕಟ್ಟೆ ಪ್ರವೇಶ, ಗುಜರಾತ್ ರಾಜ್ಯ ಮತ್ತು ಉಜ್ಬೇಕಿಸ್ತಾನ್‌ನ ಆಂಡಿಜಾನ್ ಪ್ರದೇಶ ಮತ್ತು ತಾಷ್ಕೆಂಟ್‌ನಲ್ಲಿರುವ ಭಾರತ-ಉಜ್ಬೇಕಿಸ್ತಾನ್ ಉದ್ಯಮಶೀಲತೆ ಅಭಿವೃದ್ಧಿ ಕೇಂದ್ರದ ನಡುವೆ ಸಾಲ, ಸಹಕಾರದ ಭಾರತದ ಸಾಲಿನ ಅಡಿಯಲ್ಲಿ ಗುರುತಿಸಲಾದ ಯೋಜನೆಗಳ ಅನುಷ್ಠಾನ ಸೇರಿದಂತೆ ದ್ವಿಪಕ್ಷೀಯ ಆರ್ಥಿಕ ಮತ್ತು ವ್ಯಾಪಾರ ಸಹಕಾರದ ನಡೆಯುತ್ತಿರುವ ಮತ್ತು ಯೋಜಿತ ಚಟುವಟಿಕೆಗಳನ್ನು ಎರಡೂ ಕಡೆಯವರು ಸಮಗ್ರವಾಗಿ ಪರಿಶೀಲಿಸಿದ್ದಾರೆ.

ಸಹ-ಅಧ್ಯಕ್ಷರು ವಿವಿಧ ಯೋಜನೆಗಳಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿದರು ಮತ್ತು ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದರಿಂದ ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆಯನ್ನು ಇನ್ನಷ್ಟು ಬಲಪಡಿಸುತ್ತದೆ ಎಂದು ಭರವಸೆಯನ್ನು ವ್ಯಕ್ತಪಡಿಸಿದರು. ಪರಸ್ಪರ ಅನುಕೂಲಕ್ಕೆ ಅನುಗುಣವಾಗಿ ಭಾರತಕ್ಕೆ ಭೇಟಿ ನೀಡುವಂತೆ ರಾಜ್ಯ ಸಚಿವ ಶ್ರೀ ವಿ.ಮುರಲೀಧರನ್ ರವರು ಉಪ ಪ್ರಧಾನ ಮಂತ್ರಿ ಶ್ರೀ ಉಮುರ್ಜಾಕೋವ್ ರವರಿಗೆ ಆಹ್ವಾನವನ್ನು ನೀಡಿದರು.

**ನವ ದೆಹಲಿ**
**ಆಗಸ್ಟ್ 24, 2020**

DISCLAIMER: This is an approximate translation. The original is available in English on MEA’s website and may be referred to as the official press release.